ಕೃಷ್ಣಮೂರ್ತಿ ಪ್ರತಿಷ್ಠಾನ ಭಾರತ

ಸಹ ಪಯಣ

ಬೆಂಗಳೂರು ಶಿಕ್ಷಣ ಕೇಂದ್ರದ ತ್ರೈಮಾಸಿಕ ವಾರ್ತಾಪತ್ರ

ಸಂಪುಟ 21 ಆಗಸ್ಟ್ 2021 ಸಂಚಿಕೆ 1

"ಮನಸ್ಸು ಮುಕ್ತವಾಗಲು ಸಾಧ್ಯವೇ?

ಅದು ಯಾವಾಗಲೂ ಭದ್ರತೆಯನ್ನು ಹುಡುಕುತ್ತಿದೆ, ಕೇವಲ ದೈಹಿಕವಾಗಿ ಮಾತ್ರವಲ್ಲ ಅಂತರಿಕವಾಗಿ, ಮಾನಸಿಕವಾಗಿ, ಮನಸ್ಸಿನ ವ್ಯಾಪ್ತಿಯೊಂದಿಗೆ ಆಲೋಚನೆ ನಿರಂತರವಾಗಿ ಕೆಲವು ರೀತಿಯ ಭರವಸೆ, ಅನುಕೂಲತೆ, ಭದ್ರತೆಯನ್ನು, ಒಂದು ಶಾಶ್ವತ ಸ್ಥಿತಿಯನ್ನು ಹುಡುಕುತ್ತಾ ಇರುತ್ತದೆ ಮತ್ತು ಅದರ ಹುಡುಕಾಟದಲ್ಲಿ ಪಾದ್ರಿ, ಪೂಜಾರಿ, ಪುರೋಹಿತರುಗಳ ಬಲೆಯೊಳಗೆ ಸಿಲುಕುತ್ತೀರಿ, ಪ್ರಪಂಚದಾದ್ಯಂತ ಇರುವ ಅವರ ಸಂಘ-ಸಂಸ್ಥೆಗಳೊಂದಿಗೆ ಸಿಕ್ಕಿಹಾಕಿಕೊಳ್ಳುತ್ತೀರಿ, ಆದ್ದರಿಂದ ನಿಮ್ಮ ಮನಸ್ಸು ಅವುಗಳೆಲ್ಲದರಿಂದ ಮುಕ್ತವಾಗಲು ಸಾಧ್ಯವೇ? ಇಲ್ಲವಾದರೆ ನೀವು ಖೈದಿಗಳಾಗಿ ಇರುತ್ತೀರಿ. ನೀವು ನಿಜವಾಗಿಯೂ ಮಾನವಜೀವಿಗಳಾಗಿಲ್ಲ, ಕೇವಲ ಯಾಂತ್ರಿಕವಾಗಿರುತ್ತೀರಿ."

- ಜೆ. ಕೃಷ್ಣಮೂರ್ತಿ

ಆತ್ಮೀಯ ಸಹಪಣಿಗರಿಗೆ, ಶುಭಾಷಯಗಳು!

ಕಳೆದ ಸಂಚಿಕೆಯಲ್ಲಿ ಸೂಚಿಸಿದಂತೆ, ಇಪ್ಪಂತ್ತೊಂದು ವರ್ಷಗಳ ಕಾಲ ಮುದ್ರಿತರೂಪದಲ್ಲಿ ಪ್ರಕಟಗೊಳ್ಳುತ್ತಿದ್ದ ನಮ್ಮ 'ಸಹಪಯಣ' ವಾರ್ತಾಪತ್ರಿಕೆಯು, ಈ ಸಂಚಿಕೆಯಿಂದ ಡಿಜಿಟಲ್ ರೂಪದಲ್ಲಿ ಮಾತ್ರ ಪ್ರಕಟವಾಗುತ್ತಿದೆ. ಈ ಡಿಜಿಟಲ್ ಸಂಚಿಕೆಗಳನ್ನು whatsapp ಹಾಗೂ e-mail ಮೂಲಕ ಪ್ರಸರಣ ಮಾಡಲಾಗುವುದು. ದಯವಿಟ್ಟು ಆಸಕ್ತರಿಗೆ ತಿಳಿಸಿ; ಆಸಕ್ತರ whatsapp ಸಂಖ್ಯೆಯನ್ನು 8317419451/ 9482641389 ಮೊಬೈಲ್ ಸಂಖ್ಯೆಗೆ, e-mail ವಿಳಾಸವನ್ನು kfistudy@gmail.comಗೆ ವಿಷಯದಲ್ಲಿ 'ಸಹಪಯಣ' ನಮೂದಿಸಿ ಕಳಿಸಿ. ಈ ಸಂಚಿಕೆಗಳು www.kfistudy.org ಅಂತರ್ಜಾಲದಲ್ಲಿ ಕೂಡ download ಮಾಡಲು ಲಭ್ಯವಿರುತ್ತವೆ.

ನಿಮ್ಮ ಸಹಕಾರಕ್ಕೆ ಧನ್ಯವಾದಗಳು.

ಪೋಷಕರು ಹಾಗೂ ಶಿಕ್ಷಕರುಗಳಿಗೆ - ಜೆ. ಕೃಷ್ಣಮೂರ್ತಿ

ಸಮಸ್ಯೆಗಳು ಹೆಚ್ಚುತ್ತಲೇ ಹೋಗುತ್ತಿರುವ ಈ ನಮ್ಮ ಜಗತ್ತಿನ ಸಂದಿಗ್ಧ ಪರಿಸ್ಥಿತಿಯಲ್ಲಿ ಸಂಪೂರ್ಣವಾಗಿ ಬೇರೆ ತರಹದ ನೈತಿಕತೆಯ ನಡವಳಿಕೆಯು ಹಾಗೂ ಸಮಗ್ರ ಬದುಕಿನ ಪ್ರಕ್ರಿಯೆಯನ್ನು ಅರ್ಥ ಮಾಡಿಕೊಳ್ಳುವುದರಿಂದ ಉದ್ಭವಿಸುವ ಕ್ರಿಯೆಯು ತ್ವರಿತವಾಗಿ ಅವಶ್ಯವಾಗಿರುವುದೆಂದು ನನಗೆ ತೋರುವುದು. ಈ ಚರ್ಚೆಯ ವಿಷಯವನ್ನು ರಾಜಕೀಯ ಹಾಗೂ ವ್ಯವಸ್ಥಿತವಾದ ಕ್ರಮಬದ್ಧತೆಯ ಮೂಲಕ ಆರ್ಥಿಕ ಹಾಗೂ ಮರುಸುಧಾರಣೆಗಳಿಂದ ವ್ಯವಹರಿಸಲು ಪ್ರಯತ್ನಿಸುತ್ತೇವೆ; ಆದರೆ ಇದರಿಂದ ತಾತ್ಕಾಲಿಕವಾದ ಪರಿಹಾರವು ದೊರಕಬಹುದಾದರೂ ಮಾನವನ ಅಸ್ತಿತ್ವದ ಜಟಿಲವಾದ ಸಮಸ್ಯೆಗಳನ್ನು ಯಾವಕಾಲಕ್ಕೂ ಪರಿಹರಿಸಲಾಗುವುದಿಲ್ಲ. ಎಲ್ಲ ಸುಧಾರಣೆಗಳೂ ಎಷ್ಟೇ ವ್ಯಾಪಕವಾಗಿಯೂ ನಿರಂತರವಾಗಿಯೂ ಇರುವಂತೆ ಕಂಡರೂ ಅವೆಲ್ಲವೂ ತಮ್ಮಲ್ಲೇ ಇನ್ನೂ ಹೆಚ್ಚಾಗಿ ಗೊಂದಲವನ್ನು ಉಂಟು ಮಾಡಿಕೊಂಡು ಮತ್ತಷ್ಟು ಸುಧಾರಣೆಗಳ ಅದಶ್ಯಕತೆಯನ್ನು ಉಂಟುಮಾಡುವುವು. ಮಾನವನ ಅಸ್ತಿತ್ವದ ಸಮಗ್ರ ಜಟಿಲತೆಯ ಸರಿಯಾದ ತಿಳಿವಳಿಕೆಯಿಲ್ಲದಿದ್ದರೆ ಕೇವಲ ಸುಧಾರಣೆಗಳು ಇನ್ನೂ ಹೆಚ್ಚಿನ ಸುಧಾರಣೆಗಳ ತುರ್ತು ಕೋರಿಕೆಗಳನ್ನು ತಂದೊಡ್ಡುವವು. ಸುಧಾರಣೆಗಳ ಅವಶ್ಯಕತೆಗೆ ಅಂತ್ಯವೇ ಇರುವುದಿಲ್ಲ ಹಾಗೂ ಅವುಗಳಿಗೆ ಮೂಲಭೂತವಾದ ಪರಿಹಾರವನ್ನು ಈ ರೀತಿಯ ಮರುಸುಧಾರಣೆಗಳಿಂದ ಕಂಡುಕೊಳ್ಳಲಾಗುವುದೂ ಇಲ್ಲ.

> "ಮಹತ್ವಾಕಾಂಕ್ಷೆಯು ವೈಯಕ್ತಿಕವಾಗಿರಲಿ ಅಥವಾ ಸಾಮೂಹಿಕವಾಗಿರಲಿ, ಅದು ಯಾವಾಗಲೂ ಸಮಾಜ ವಿರೋಧಿಯಾಗಿರುವುದು."
>
> - ಜೆ. ಕೃಷ್ಣಮೂರ್ತಿ

ರಾಜಕೀಯ ಆರ್ಥಿಕ ಅಥವಾ ಸಾಮಾಜಿಕ ಕ್ರಾಂತಿಗಳಿಂದಲೂ ಸುಧಾರಣೆಯಾಗುವುದಿಲ್ಲ; ಏಕೆಂದರೆ ಅವುಗಳು ಭಯಂಕರ ದಬ್ಬಾಳಿಕೆಯನ್ನುಂಟುಮಾಡಿರುವುವು, ಅಥವಾ ಅಂತಹ ಅಧಿಕಾರಗಳ ಶಕ್ತಿಯು ಬೇರೆ ಗುಂಪಿನವರ ಕೈ ಸೇರಬಹುದು. ಆಗ ಅಂತಹ ಕ್ರಾಂತಿಗಳ ಗೊಂದಲ ಹಾಗೂ ಸಂಘರ್ಷಣೆಯಿಂದ ಯಾವಾಗಲೂ ಹೊರಗೆ ಬರಲಾಗುವುದಿಲ್ಲ.

ಆದರೆ ಈ ಆತಂಕ, ಸಂಘರ್ಷಣೆ ಹಾಗು ಹತಾಶೆಗಳಿಗೆ ಕೊನೆಯಿಲ್ಲದ ಸರಣಿಯ ಬಂಧನದಿಂದ ನಾವು ಮುಕ್ತರಾಗಬೇಕಾದರೆ ಸಂಪೂರ್ಣವಾಗಿ ಬೇರೆಯೇ ಆದ ಕ್ರಾಂತಿಯೊಂದಿದೆ. ಆ ಕ್ರಾಂತಿಯು ಆಗಲೇಬೇಕು. ಆ ಕ್ರಾಂತಿಯು ಅನುಪಯುಕ್ತವಾದ ಭಾವನೆಗಳಿಂದ ಕೂಡಿರದೆ ಮನಸ್ಸಿನಲ್ಲೇ ಆಮೂಲಾಗ್ರವಾದ ಪರಿವರ್ತನೆ ಆಗುವಂಥದ್ದಾಗಿರಬೇಕು. ಅಂತಹ ಪರಿವರ್ತನೆಯನ್ನು ಸರಿಯಾದ ಶಿಕ್ಷಣ ಹಾಗೂ ಮಾನವನ ಪೂರ್ಣ ಬೆಳವಣಿಗೆಯಿಂದ ಮಾತ್ರ ತರಬಹುದು. ಇಂತಹ ಕ್ರಾಂತಿಯು ಕೇವಲ ಆಲೋಚನೆಯಿಂದಲ್ಲದೆ ಸಮಗ್ರ ಮಾನಸಿಕ ಪ್ರವೃತ್ತಿಯಲ್ಲೇ ಆಗಬೇಕು. ಆಲೋಚನೆ ಎನ್ನುವುದು ಕೇವಲ ಫಲಿತಾಂಶ; ಅದರ ಉಗಮಸ್ಥಾನವಲ್ಲ. ಅದರ ಉಗಮಸ್ಥಾನದಲ್ಲಿ ಪೂರ್ಣವಾದ ಪರಿವರ್ತನೆ ಆಗಲೇಬೇಕು; ಕೇವಲ ಫಲಿತಾಂಶದ ಬದಲಾವಣೆ ಮಾತ್ರವಲ್ಲ. ಈಗ ನಾವು ಫಲಿತಾಂಶದ ಕುರುಹುಗಳನ್ನು ಹೇಗೋ ಸರಿಪಡಿಸಲು ನೋಡುತ್ತೇವೆ. ನಮ್ಮ ಸಂಪ್ರದಾಯ ಹಾಗೂ ಅದರ ಹಳೆಯ ಪ್ರಕ್ರಿಯೆಗಳನ್ನು ನಿರ್ಮೂಲ ಮಾಡಿ ಅತ್ಯಗತ್ಯವಾದ ಬದಲಾವಣೆಯನ್ನು ಮಾಡುತ್ತಿಲ್ಲ. ನಮ್ಮ ಆಸಕ್ತಿಯೆಲ್ಲ ಈ ಅತ್ಯಗತ್ಯವಾದ ಬದಲಾವಣೆಯನ್ನು ಮಾಡುವುದರಲ್ಲಿದೆ. ಈ ಬದಲಾವಣೆಯನ್ನು ಸರಿಯಾದ ಶಿಕ್ಷಣವು ಮಾತ್ರ ಉಂಟುಮಾಡಲು ಸಾಧ್ಯ.

ವಿಚಾರಮಾಡುವುದು ಹಾಗೂ ಕಲಿತುಕೊಳ್ಳುವುದು ಮನಸ್ಸಿನ ಕ್ರಿಯೆ. ಕಲಿತುಕೊಳ್ಳುವುದು ಎಂದು ನಾನು ಹೇಳುವುದರ ಅರ್ಥ ಕೇವಲ ಸ್ಮರಣಶಕ್ತಿಯನ್ನು ಬೆಳಸಿಕೊಳ್ಳುವುದು ಅಥವಾ ಶೇಖರಿಸಿಟ್ಟುಕೊಳ್ಳುವುದು ಎಂದಲ್ಲ ಅದು ನಂಬಿಕೆಗಳಾಗಲಿ, ಆದರ್ಶಗಳಾಗಲಿ ಇಲ್ಲದೆ ಹಾಗೂ ಭ್ರಮೆಗೂ ಒಳಗಾಗದೆ, ಸ್ಪಷ್ಟ ಹಾಗೂ ಸ್ವಸ್ಥವಾದ ಮನಸ್ಸಿನಿಂದ ಆಲೋಚಿಸುವ ಸಾಮರ್ಥ್ಯ. ಚಿಂತನೆಯು ಅಂತಿಮ ತೀರ್ಮಾನದಿಂದ ಮೂಡುವುದಾದರೆ ಅದರಿಂದ ಕಲಿಕೆ ಇರುವುದಿಲ್ಲ. ಕೇವಲ ಮಾಹಿತಿ ಅಥವಾ ಜ್ಞಾನವನ್ನು ಪಡೆದುಕೊಳ್ಳುವುದು ಕಲಿಕೆಯಲ್ಲ, ಕಲಿಕೆಯು ತಿಳಿವಳಿಕೆಯ ಮೇಲಿನ ಪ್ರೀತಿಯನ್ನು ವ್ಯಕ್ತಪಡಿಸುವುದು ಹಾಗೂ ಅದು ಏನು ಮಾಡಿದರೂ ಅದನ್ನು ಮಾಡುವುದರಲ್ಲಿಯೇ ಇರುವ ಪ್ರೀತಿಯಾಗಿರುವುದು. ಯಾವ ವಿಧವಾದ ಬಲಾತ್ಕಾರವೂ ಇರಬಾರದು. ಆಗ ಮಾತ್ರ ಕಲಿಯುವುದು ಸಾಧ್ಯವಾಗುವುದು. ಬಲಾತ್ಕಾರವು ಉತ್ತೇಜನೆಯೂ, ಬಹುಮಾನದ ಪುರಸ್ಕಾರವೂ ಆಗಿರಬಹುದು.

ಬಹುತೇಕ ಜನರು ಹೋಲಿಕೆ ಮಾಡುವುದರಿಂದ ಕಲಿಯುವಿಕೆಗೆ ಪ್ರೋತ್ಸಾಹವಾಗುವುದೆಂದು ಯೋಚಿಸುವರು; ಆದರೆ ವಾಸ್ತವದಲ್ಲಿ ಅದು ತದ್ವಿರುದ್ಧವಾಗಿರುವುದು. ಹೋಲಿಕೆ ಮಾಡುವುದರಿಂದ ಹತಾಶೆಯುಂಟಾಗಿ ಅದರಿಂದ ಅಸೂಯೆಯು ಪ್ರೋತ್ಸಾಹಿತವಾದಾಗ ಅದನ್ನು ಪೈಪೋಟಿ ಎನ್ನಲಾಗುವುದು. ಬೇರೆ ರೀತಿಯ ಮನವೊಲಿಸುವಿಕೆಯಂತೆ ಹೋಲಿಸುವಿಕೆಯು ಕಲಿಯುವಿಕೆಗೆ ಅಡ್ಡಿಯಾಗುವುದಲ್ಲದೆ ಭಯವನ್ನೂ ಉಂಟುಮಾಡುವುದು. ಮಹತ್ವಾಕಾಂಕ್ಷೆಯು ಕೂಡ ಭಯವನ್ನುಂಟುಮಾಡುವುದು. ಮಹತ್ತಾಕಾಂಕ್ಷೆಯು ವೈಯಕ್ತಿಕವಾಗಿರಲಿ ಅಥವ ಸಾಮೂಹಿಕವಾಗಿರಲಿ, ಅದು ಯಾವಾಗಲೂ ಸಮಾಜ ವಿರೋಧಿಯಾಗಿರುವುದು. ಮೇಲ್ನೋಟಕ್ಕೆ ಮಾತ್ರ ಒಳಿತಾಗಿ ತೋರುವ ಮಹತ್ವಾಕಾಂಕ್ಷೆಯು ಮೂಲಸ್ವರೂಪದಲ್ಲಿ ಅಪಾಯಕಾರಿ ಆಗಿರುವುದು. ಒಳ್ಳೆಯ

ಮನಸ್ಸಿನ ಬೆಳವಣಿಗೆಯನ್ನು ಹುರಿದುಂಬಿಸುವುದು ಅತ್ಯಗತ್ಯ. ಅಂತಹ ಮನಸ್ಸಿಗೆ ಸಮಗ್ರ ಜೀವನದ ಅನೇಕ ಸಮಸ್ಯೆಗಳನ್ನು ಬಗೆಹರಿಸುವ ಸಾಮರ್ಥ್ಯವಿರುವುದು. ಆ ಮನಸ್ಸು ಆತ್ಮವಂಚನೆ, ಹತಾಶೆ, ಕಟುತ್ವ ಅಥವ ನಿರಾಶಾವಾದದಿಂದ ನುಣುಚಿಕೊಳ್ಳಲು ಪ್ರಯತ್ನಿಸುವುದಿಲ್ಲ. ಮನಸ್ಸಿಗೆ ತನ್ನದೇ ಆದ ನಿರ್ಬಂಧ, ತನ್ನದೇ ಆದ ಉದ್ದೇಶಗಳು ಹಾಗೂ ಧ್ಯೇಯಗಳ ವಿಷಯದಲ್ಲಿ ಅರಿವು ಇರಬೇಕಾದುದು ಅತ್ಯವಶ್ಯ.

ಒಳ್ಳೆಯ ಮನಸ್ಸಿನ ಬೆಳವಣಿಗೆಯೇ ನಮಗಿರುವ ಮುಖ್ಯ ಆಸಕ್ತಿ. ಆದುದರಿಂದ ಒಬ್ಬನು ಹೇಗೆ ಬೋಧಿಸುವನು ಎನ್ನುವುದು ಬಹಳ ಮುಖ್ಯವಾಗಿಬಿಡುವುದು. ಸಂಪೂರ್ಣವಾಗಿ ಮನಸ್ಸಿನ ವಿಕಾಸವು ಆಗಲೇಬೇಕು; ಕೇವಲ ಮಾಹಿತಿಗಳನ್ನು ಒದಗಿಸುವುದು ಮಾತ್ರವಲ್ಲ. ವಿದ್ಯೆಯನ್ನು ಹೇಳಿಕೊಡುವ ಕಾರ್ಯವಿಧಾನದಲ್ಲಿ ಬೋಧಿಸುವವನು ವಿದ್ಯಾರ್ಥಿಗಳನ್ನು ಚರ್ಚೆಯಲ್ಲಿ ಭಾಗವಹಿಸಲು ಹಾಗೂ ಸ್ವತಂತ್ರವಾಗಿ ಚಿಂತಿಸಲು ಆಮಂತ್ರಿಸಬೇಕು.

ಕಲಿಯುವಿಕೆಯಲ್ಲಿ 'ಪಾರಂಗತನ' ಎನ್ನುವ ಪ್ರಕಾರಕ್ಕೆ ಮನ್ನಣೆ ಇರುವುದಿಲ್ಲ. ಗುರು ಹಾಗೂ ಶಿಷ್ಯಇಬ್ಬರಿಗೂ ಅವರ ನಡುವೆ ಇರುವ ವಿಶೇಷವಾದ ಸಂಪರ್ಕದಿಂದ ಇಬ್ಬರೂ ಕಲಿಯುವವರೆ, ಆದರೆ ಇದರಿಂದ ಕಲಿಸುವವನು ಚಿಂತನೆಯಲ್ಲಿರಬೇಕಾದ ನಿಯಮ ಪಾಲನೆಯನ್ನು ಅಲ್ಲಗಳೆಯುವನೆಂದು ಅರ್ಥವಲ್ಲ, ಅಧಿಕಾರವಾಣಿಯಿಂದ ಹೇಳುವ ಶಿಸ್ತಿನ ಮೂಲಕ ಚಿಂತನೆಯ ನಿಯಮ ಪಾಲನೆಯನ್ನು ತರಲಾಗುವುದಿಲ್ಲ; ಆದರೆ ಬುದ್ಧಿಶಕ್ತಿಯನ್ನು ಬೆಳೆಸಿಕೊಳ್ಳುವಾಗ ಸ್ವಾತಂತ್ರ್ಯದ ಪ್ರಜ್ಞೆ ಇರಬೇಕೆಂಬುದನ್ನು ಬೋಧಕನು ಅರಿತುಕೊಂಡಾಗ ಅದನ್ನು ಸಹಜವಾಗಿ ತರಲಾಗುವುದು. ಇದರ ಅರ್ಥ ಇಷ್ಟ ಬಂದಂತೆ ಮಾಡಬಹುದಾದ ಸ್ವಾತಂತ್ರ್ಯ ಎಂದಲ್ಲ ಅಥವಾ ಕೇವಲ ನಿರಾಕರಿಸುವ ಹುರುಪಿನಿಂದ ಚಿಂತನೆಮಾಡುವುದು ಎಂದಲ್ಲ, ಅದು ವಿದ್ಯಾರ್ಥಿಗೆ ಅವನ ದೈನಂದಿನ ಚಿಂತನೆ ಹಾಗೂ ಕ್ರಿಯೆಯ ಮೂಲಕ ಅವನ ಅಪೇಕ್ಷೆ ಹಾಗೂ ಧ್ಯೇಯಗಳ ಪರಿಜ್ಞಾನವಿರಲು ಸಹಾಯವಾಗುವ ಸ್ವಾತಂತ್ರ್ಯ.

ಪ್ರತಿಯೊಬ್ಬ ವ್ಯಕ್ತಿಯ ಸಂಪೂರ್ಣ ಅಭಿವೃದ್ಧಿಯ ಬಗ್ಗೆ ನಮ್ಮ ಕಾಳಜಿ ಇರುವುದು; ಪ್ರತಿಯೊಬ್ಬನೂ ತನಗಿರಬಹುದಾದ ಅತಿಹೆಚ್ಚಿನ ಅರ್ಹತೆಯನ್ನು ಪಡೆದುಕೊಳ್ಳಲು ಸಹಾಯಮಾಡುವ ಕಾಳಜಿ ನಮಗಿದೆ, ಅದು ಬೋಧಕನ ಯಾವುದೋ ಕಾಲ್ಪನಿಕ ಪರಿಕಲ್ಪನೆ, ಆದರ್ಶವಲ್ಲ. ವಿಜ್ಞಾನಿಯೋ ಅಥವಾ ತೋಟಗಾರನೋ ಯಾರೇ ಆಗಿರಲಿ, ಆ ವ್ಯಕ್ತಿಯ ವಿಕಾಸವನ್ನು ಯಾವುದೇ ಹೋಲಿಕೆಯ ಸ್ಫೂರ್ತಿಯು ನಿರೋಧಿಸುವುದು. ಹೋಲಿಸುವುದು ಇಲ್ಲದಿರುವಾಗ ಒಬ್ಬ ತೋಟಗಾರನಿಗಿರುವ ಗರಿಷ್ಠ ಅರ್ಹತೆಯೇ ವಿಜ್ಞಾನಿಗೂ ಇರುವುದು; ಆದರೆ ಹೋಲಿಸಿ ನೋಡಿದಾಗ ಅವರಲ್ಲಿ ಮಾನಹಾನಿ ಹಾಗೂ ಅಸೂಯೆಯ ಪ್ರತಿಕ್ರಿಯೆಯಿಂದ ವ್ಯಕ್ತಿಗಳ ಮಧ್ಯೆ ಸಂಘರ್ಷಣೆಯುಂಟಾಗುವುದು. ದುಃಖದಂತೆ ಪ್ರೀತಿಯನ್ನು ಹೋಲಿಕೆ ಮಾಡಲಾಗುವುದಿಲ್ಲ, ಅದನ್ನು ಹೆಚ್ಚಾಗಿರುವುದೆಂದೋ ಅಥವಾ ಕಡಿಮೆಯಾಗಿರುವುದೆಂದೋ ಹೋಲಿಸಿ ಹೇಳಲಾಗುವುದಿಲ್ಲ ಶ್ರೀಮಂತನಾಗಲಿ, ಬಡವನಾಗಲಿ ದುಃಖವು ದುಃಖವೆ, ಪ್ರೀತಿಯು ಪ್ರೀತಿಯೆ.

ಪ್ರತಿಯೊಬ್ಬ ವ್ಯಕ್ತಿಯ ಸಂಪೂರ್ಣ ಅಭಿವೃದ್ಧಿಯು ಸಮಾನವಾದ ಸಮಾಜವನ್ನು ಸೃಷ್ಟಿಸುವುದು. ಇವತ್ತಿನ ಸಮಾಜದಲ್ಲಿರುವ ಹೋರಾಟವು ಆರ್ಥಿಕ ಅಥವಾ ಆಧ್ಯಾತ್ಮಿಕ ಮಟ್ಟದಲ್ಲಿ ಸಮಾನತೆಯನ್ನು ತರುವುದು ಎನ್ನುವುದಕ್ಕೆ ಯಾವ ಅರ್ಥವೂ ಇರುವುದಿಲ್ಲ. ಸಮಾನತೆಯನ್ನು ಸ್ಥಾಪಿಸಲು ಮಾಡುವ ಸಮಾಜ ಸುಧಾರಣೆಗಳು ಬೇರೆ ತರಹದ ಸಮಾಜ ವಿರೋಧಿ ಚಟುವಟಿಕೆಗಳಿಗೆ ಕಾರಣವಾಗುವುದು; ಆದರೆ ಸರಿಯಾದ ಶಿಕ್ಷಣ ವ್ಯವಸ್ಥೆ ಇದ್ದರೆ ಸಮಾನತೆಯನ್ನು ಬಯಸುವ ಆವಶ್ಯಕತೆಯೇ ಇರುವುದಿಲ್ಲ, ಏಕೆಂದರೆ ಆಗ ಸಾಮರ್ಥ್ಯವನ್ನು ಹೋಲಿಸಿ ನೋಡುವುದು ಅಂತ್ಯವಾಗುವುದು.

"ಪೋಷಕರು ಹಾಗೂ ಶಿಕ್ಷಕರಿಗೆ" ಪುಸ್ತಕದಿಂದ
ಮೂಲ: "To Parents and Teachers"
ಅನು: ಎಸ್.ಕೆ. ಸ್ವಾಮಿ



"ಜೀವನವು ಸಂಬಂಧದೊಳಗಿನ ಆಂದೋಲನವಾಗಿದೆ, ಸಂಬಂಧವಿಲ್ಲದೆ ನೀವು ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ. ಜೀವನವು ಸಂಬಂಧ ಮತ್ತು ಕ್ರಿಯೆಯಾಗಿದೆ, ನಾವು ದುರಾಸೆ ಉಳ್ಳವರಾದಲ್ಲಿ , ಹಿಂಸಾತ್ಮಕ ಆಗಿದ್ದಲ್ಲಿ ನಾವು ಹಿಂಸಾತ್ಮಕ ದುರಾಶೆಯ ಸಮಾಜವನ್ನು ರಚಿಸುತ್ತೇವೆ. ಹೀಗಾಗಿ ನಾವು ಆರಂಭದಿಂದಲೂ ಅತ್ಯಂತ ಸ್ಪಷ್ಟವಾಗಿರಬೇಕು ಮತ್ತು ಸಂಬಂಧ ಎಂದರೇನು ಎಂದು ಕಂಡುಕೊಳ್ಳಬೇಕು. ನಿಮ್ಮ ಸಂಬಂಧ ಪ್ರತಿಬಿಂಬದ ಮೇಲೆ ಆಧಾರಿತವಾಗಿದೆ, ಏಕೆ? ಅಲ್ಲಿ ಭದ್ರತೆ ಇದೆ. ಮಾನಸಿಕ ಬಿಂಬಗಳ ನಡುವೆ ಸಂಬಂಧ ಇರುವುದಿಲ್ಲ."

- ಜೆ. ಕೃಷ್ಣಮೂರ್ತಿ

ಹೋಲಿಕೆ - ಜೆ. ಕೃಷ್ಣಮೂರ್ತಿ

ನಾವು ನಿನ್ನೆ ಭಯದ ಸಮಸ್ಯೆಯ ಬಗ್ಗೆ ಚರ್ಚಿಸುತ್ತಿದ್ದೆವು ಎಂಬುದು ನಿಮಗೆ ನೆನಪಿರಬಹುದು. ನಮ್ಮಲ್ಲಿ ಹೆಚ್ಚಿನವರಿಗೆ ಒಂದಲ್ಲ ಒಂದರ ಬಗ್ಗೆ ಭಯ, ನಾವು ಭಯವನ್ನು ಹೋಗಲಾಡಿಸಿದರೆ, ಅದನ್ನು ನಿವಾರಿಸಿಕೊಂಡರೆ ಪ್ರಾಯಃ ಸಂಪೂರ್ಣ ಭಿನ್ನವಾದ ಒಂದು ಪ್ರಪಂಚವನ್ನು ಕಟ್ಟಬಹುದು.

******

ಬದುಕುವುದರ ನಿಜವಾದ ಅಂತರಂಗದ ಆನಂದ, ಆಂತರಿಕ ಸಿರಿವಂತಿಕೆಯ ಭಾವನೆ, ಈ ಭೂಮಿ ನಮ್ಮದು ಇದನ್ನು ಇನ್ನಷ್ಟು ಸಮೃದ್ಧಗೊಳಿಸಬೇಕೆಂಬ ಭಾವ, ನಮ್ಮ ಸಂಬಂಧಗಳಲ್ಲಿ ಒಂದು

ವಿಭಿನ್ನವಾದ ಬದಲಾವಣೆ ತರಬೇಕೆಂಬ ಕಾತರತೆ – ಇವೆಲ್ಲ ಮುಖ್ಯವಾದ ಸಂಗತಿಗಳು, ಆದರೆ ಭಯವಿದ್ದಲ್ಲಿ ನೀವು ಇದನ್ನೆಲ್ಲ ಮಾಡಲು ಸಾಧ್ಯವಿಲ್ಲ. ನಮ್ಮ ಇರವಿನಲ್ಲಿ ಪ್ರೇಮವಿರಲು ಇವೆಲ್ಲ ಒದಗಿಬರುತ್ತವೆ. ಪ್ರೇಮವನ್ನು ನೀವು ರೂಢಿಸಿಕೊಳ್ಳಲು ಸಾಧ್ಯವಿಲ್ಲ. ಅದು ಆಚರಿಸುವಂಥದ್ದೂ ಅಲ್ಲ. "ನಾನು ಪ್ರೀತಿಸಬೇಕು, ನಾನು ಕರುಣಾಳುವಾಗಬೇಕು, ನಾನು ಸೌಮ್ಯ ಸ್ವಭಾವದವನಾಗಬೇಕು," ಎಂದು ದಿನದಿನವೂ ಹೇಳಬಹುದು, ಇದರಿಂದ ಪ್ರೇಮ ಹೊರಹೊಮ್ಮುವುದಿಲ್ಲ. ಅದು ನಿಮಗೆ ಅರಿವಿಲ್ಲದಂತೆ ಬೆಳಗಿನ ಕಿರಣ ಹೊರಹೊಮ್ಮುವ ಹಾಗೆ ಹೊರಹೊಮ್ಮುತ್ತದೆ; ಅದು ಭಯವಿಲ್ಲದಿರುವಾಗ ಹೊರಹೊಮ್ಮುತ್ತದೆ. ದಯವಿಟ್ಟು ಇದನ್ನು ಎಚ್ಚರದಿಂದ ಆಲಿಸಿ. ಏಕೆಂದರೆ, ನಾವು ಎಳೆಯರಾಗಿರುವಾಗ, ಇದನ್ನು ಅರ್ಥಮಾಡಿಕೊಂಡು ಅಂಥ ಭಾವ ಬೆಳೆಸಿಕೊಂಡರೆ ಆಗ ಯಾವುದೂ ನಮ್ಮನ್ನು ನಾಶ ಮಾಡಲಾರದು. ನೀವು ಬಡವರಿರಬಹುದು, ನಿಮ್ಮಲ್ಲಿ ಸಾಮರ್ಥ್ಯವಿಲ್ಲದಿರಬಹುದು, ನೀವು ಸುಂದರವಾಗಿ ಚೆನ್ನಾಗಿ ಕಾಣದಿರಬಹುದು, ಆದರೆ ಬದುಕನ್ನು ಶ್ರೀಮಂತ ಗೊಳಿಸುವ, ನಿಜಕ್ಕೂ ಶ್ರೀಮಂತಗೊಳಿಸುವ ಗುಣವೇ ಸಕಲ ಭಯಮುಕ್ತವಾದ ಪ್ರೇಮ.

> "ಹೋಲಿಕೆ ಇರುವಲ್ಲಿ ಪ್ರೇಮವಿರುವುದಿಲ್ಲ."
>
> - ಜೆ. ಕೃಷ್ಣಮೂರ್ತಿ

ಹೀಗಾಗಿ, ಇಂಥ ಒಂದು ಶಿಕ್ಷಣದ ಕೇಂದ್ರದಲ್ಲಿ ನಿಜಕ್ಕೂ ಶಿಕ್ಷಕರು, ನೀವು ಹಾಗೂ ಪ್ರತಿಷ್ಠಾನದ ಸರ್ವ ಸದಸ್ಯರ ಮೊದಲ ಆದ್ಯತೆ ಎಂದರೆ ಭಯದ ನಿಜವಾದ ಕಾರಣಗಳ ನಿವಾರಣೆ, ನೀವು ಇಲ್ಲಿರುವಾಗ, ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಗಣಿತ, ಭೂಗೋಳ ಅಥವಾ ಇತಿಹಾಸವನ್ನು ವಿವರಿಸುವ ಹಾಗೆ ಭಯದ ಕಾರಣಗಳನ್ನು ವಿವರಿಸಿ ಹೇಳುವುದು ಬಹಳ ಅಗತ್ಯ. ಶಿಕ್ಷಕರಲ್ಲಿ ಇನ್ನೂ ಭಯವಿರಬಹುದು, ಪ್ರತಿಷ್ಠಾನದ ಸದಸ್ಯರಿಗೂ ಭಯವಿರಬಹುದು. ಆದರೆ ನಿಮಗೆ ಇದನ್ನೆಲ್ಲ ವಿವರಿಸಿ ಹೇಳುವುದು ತುಂಬಾ ಅಗತ್ಯ; ಏಕೆಂದರೆ ಆಗ ನೀವು ಒಂದು ಹೊಸ ಪ್ರಪಂಚವನ್ನು, ಹೊಸ ಶಿಕ್ಷಣವನ್ನು ರೂಪಿಸುತ್ತೀರಿ.

ನಾನು ಭಾವಿಸುವಂತೆ ಭಯಕ್ಕೆ ಒಂದು ಕಾರಣ ಹೋಲಿಕೆ. 'ಹೋಲಿಕೆ' ಅಂದರೆ ಏನು ನಿಮಗೆ ಗೊತ್ತಾ? ನಿಮ್ಮನ್ನು ಬೇರೆಯವರ ಜತೆ ಹೋಲಿಸುವುದು, ನಿಮ್ಮನ್ನು ಜಾಣ ಹುಡುಗನ ಜತೆ ತುಲನೆ ಮಾಡುವುದು ಅಥವಾ ಓರ್ವ ದಡ್ಡ ಹುಡುಗನ ಜತೆ ಹೋಲಿಸುವುದು, ನಿಮ್ಮನ್ನು ಗಾಂಧೀಜಿ ಅಥವಾ ಬುದ್ಧ ಅಥವಾ ಕ್ರಿಸ್ತನ ಜತೆ ಹೋಲಿಸುವುದು, ನೀವು ಕಮ್ಯುನಿಸ್ಟ್ ಆಗಿದ್ದರೆ ಬುದ್ಧ ಅಥವಾ ಕ್ರಿಸ್ತನಲ್ಲ - ಸ್ಟಾಲಿನ್ ಅಥವಾ ಲೆನಿನ್ ಜತೆ ಹೋಲಿಸುವುದು - ನಿಮ್ಮನ್ನು ಇನ್ಯಾರ ಜತೆಗೋ ಹೋಲಿಸುವುದು ಭಯದ ಆರಂಭ, ಯಾಕೆ ಅಂತ ನಾನು ನಿಮಗೆ ತಿಳಿಸುತ್ತೇನೆ.

ನಾವು ಅದರ ಆಳಕ್ಕಿಳಿಯೋಣ, ಆಗ ನಿಮಗೆ ನಿರ್ಭಯವಾಗಿರುವುದರ ಮಹತ್ವ ತಿಳಿಯುತ್ತದೆ. ನಮ್ಮ ಇಡಿ ಸಮಾಜ ಹೋಲಿಕೆಯ ಮೇಲೆ ನಿಂತಿದೆ, ಅಲ್ಲವೆ? ಬೆಳವಣಿಗೆ ದೃಷ್ಟಿಯಿಂದ ಹೋಲಿಕೆ ಆವಶ್ಯಕ ಎಂದು ನಾವು ಭಾವಿಸುತ್ತೇವೆ. ನಾನು ನನ್ನನ್ನು ಇನ್ನೊಬ್ಬ ರಾಜಕಾರಣಿಯ ಜತೆ ಹೋಲಿಸಿಕೊಂಡು "ಒಳ್ಳೇದು, ನಾನು ಅವನನ್ನು ಸೋಲಿಸಬೇಕು, ಆತನಿಗಿಂತ ನಾನು ಉತ್ತಮನಾಗಬೇಕು" ಎಂದು ಹೇಳಿಕೊಳ್ಳುತ್ತೇನೆ. ಶಿಕ್ಷಕರು ನಿಮ್ಮನ್ನು ನಿಮಗಿಂತ ಕೊಂಚ ಹೆಚ್ಚು ಜಾಣನಾದ ವಿದ್ಯಾರ್ಥಿಯ ಜೊತೆ ತುಲನೆ ಮಾಡಿದಾಗ ನಿಮಗೇನಾಗುತ್ತದೆ? ಬೇರೆಯವರ ಜತೆ ಹೋಲಿಸಿದಾಗ ನಿಮಗೇನಾಗುತ್ತದೆ ಎಂಬುದನ್ನು ಗಮನಿಸಿದ್ದೀರಾ? "ಆ ಹುಡುಗನಷ್ಟೇ ಜಾಣನಾಗು" ಎಂದು ಶಿಕ್ಷಕರು ಹೇಳುತ್ತಾರೆ. ಆ ಹುಡುಗ ಅಥವಾ ಹುಡುಗಿಯಷ್ಟು ಬುದ್ಧಿವಂತ, ಪರಿಶ್ರಮಿ ಅಥವಾ ಅಧ್ಯಯನಶೀಲನನ್ನಾಗಿ ಮಾಡಲು ಅವರು ನಿಮಗೆ ಅಂಕಗಳನ್ನು, ದರ್ಜೆಗಳನ್ನು ಕೊಡುತ್ತಾರೆ. ನೀವು ಹೆಣಗುತ್ತೀರಿ, ಸ್ಪರ್ಧಿಸುತ್ತೀರಿ; ಇನ್ನೊಬ್ಬ ಹುಡುಗನ ಬಗ್ಗೆ ನಿಮಗೆ ಹೊಟ್ಟೆಕಿಚ್ಚಾಗುತ್ತದೆ. ಹೀಗಾಗಿ, ಹೋಲಿಕೆಯಿಂದ ಹೊಟ್ಟೆಕಿಚ್ಚು, ಮಾತ್ಸರ್ಯ ಉಂಟಾಗುತ್ತದೆ; ಈ ಮತ್ಸರವೇ ಭಯದ ಆರಂಭ. ನಿಮ್ಮನ್ನು ಇನ್ನೊಬ್ಬ ಹುಡುಗನ ಜತೆ ಹೋಲಿಸಿದಾಗ ನೀವು ಹುಡುಗ ಅಥವಾ ಹುಡುಗಿ ಮುಖ್ಯವಾಗುವುದಿಲ್ಲ. ಆದರೆ ಆ ಇನ್ನೊಬ್ಬ ಮುಖ್ಯವಾಗುತ್ತಾನೆ. ನಿಮ್ಮನ್ನು ನೀವು ಇತರರ ಜತೆ ಹೋಲಿಸಿ ಕೊಂಡಾಗ ಆ ಮತ್ತೊಬ್ಬ ನಿಮಗಿಂತ ಹೆಚ್ಚು ಮುಖ್ಯವಾಗಿಬಿಡುತ್ತಾನೆ. ಹೌದಲ್ಲವೇ? ನಿಮ್ಮ ಸಾಮರ್ಥ್ಯಗಳೊಂದಿಗೆ, ನಿಮ್ಮ ಪ್ರವೃತ್ತಿಗಳ ಜತೆ, ನಿಮ್ಮ ಕಷ್ಟಗಳು - ಸಮಸ್ಯೆಗಳ ಜತೆ, ನಿಮ್ಮ ಇರವಿನ ಜತೆ ಒಬ್ಬ ವ್ಯಕ್ತಿಯಾಗಿ ನೀವು ಮುಖ್ಯವಾಗುವುದಿಲ್ಲ. ಆ ಇನ್ನೊಬ್ಬ ಮುಖ್ಯವಾಗುತ್ತಾನೆ, ಹೀಗಾಗಿ ವ್ಯಕ್ತಿಯಾಗಿ ನೀವು ಬದಿಗೆ ಸರಿಯುತ್ತೀರಿ, ಆ ಇನ್ನೊಬ್ಬನ ಹಾಗೆ ಆಗಲು ಹೆಣಗುತ್ತಿರುತ್ತೀರಿ. ಈ ಹೆಣಗಾಟದಲ್ಲಿ ಅಸೂಯೆ, ಭಯ ಹುಟ್ಟಿಕೊಳ್ಳುತ್ತದೆ. ತರಗತಿಯಲ್ಲಿ ಶಿಕ್ಷಕರು ನಿಮ್ಮನ್ನು ಬೇರೊಬ್ಬನ ಜತೆ ಹೋಲಿಸಿ ನೋಡಿ, ನಿಮಗೆ ಪ್ರತ್ಯೇಕವಾಗಿ ಅಂಕಗಳನ್ನು,

ದರ್ಜೆಗಳನ್ನು ಕೊಡುತ್ತಾರೆ; ನೀವು ನಾಶವಾದಿರಿ. ನಿಮ್ಮ ಸ್ವಂತ ಸಾಮರ್ಥ್ಯಗಳು, ನಿಮ್ಮ ಅಂತಸ್ಥ ಅಸ್ತಿತ್ವ ದಮನಿಸಲ್ಪಡುತ್ತದೆ. ನೀವು 'ಆತ್ಮ', 'ಮುಕ್ತಿ' ಮತ್ತು ಇನ್ನಿತರ ವಿಚಾರಗಳ ಬಗ್ಗೆ ಕೇಳಿರುತ್ತೀರಿ. ಅವೆಲ್ಲ ಕೇವಲ ಶಬ್ದಗಳು ಮಾತ್ರ; ಏಕೆಂದರೆ ನಿಮ್ಮನ್ನು ಪರರ ಜತೆ ತುಲನೆ ಮಾಡಿದಾಗ ನಿಮ್ಮನ್ನು ನಾಶ ಮಾಡಲಾಗುತ್ತದೆ. ನೀವು ಮಂದಮತಿಯೋ ಅಲ್ಪಮತಿಯೋ ಆಗಿರಬಹುದು, ಆದರೆ ಶಿಕ್ಷಕರು ಅಥವಾ ಹೆತ್ತವರು ಬುದ್ಧಿವಂತನೆಂದು ಪರಿಗಣಿಸುವ ಆ ಇನ್ನೊಬ್ಬ ಹುಡುಗ ಅಥವಾ ಹುಡುಗಿಯಷ್ಟೇ ನೀವೂ ಮುಖ್ಯರು.

ಹೀಗಾಗಿ ಶಾಲೆ ಅಥವಾ ಇಂಥ ಒಂದು ಶೈಕ್ಷಣಿಕ ಕೇಂದ್ರ ಹೋಲಿಕೆಯನ್ನು ಸಂಪೂರ್ಣವಾಗಿ ನಿವಾರಣೆ ಮಾಡಬೇಕಲ್ಲವೆ? ಏಕೆಂದರೆ ನೀವು ಮುಖ್ಯ, ಆ ಮತ್ತೊಬ್ಬನಲ್ಲ? ನಿಮ್ಮ ಶಿಕ್ಷಕರು ಪ್ರತಿಯೊಬ್ಬ ವಿದ್ಯಾರ್ಥಿಯ ವಿಚಾರದಲ್ಲಿ ಹೆಚ್ಚು ಎಚ್ಚರದಿಂದ ಇರಬೇಕಲ್ಲವೇ? ಸಮಸ್ಯೆ ಏನೆಂದರೆ ಹೆತ್ತವರಿಗೆ ಇದರಲ್ಲೆಲ್ಲ ಆಸಕ್ತಿಯೇ ಇಲ್ಲ: ನೀವು ಪರೀಕ್ಷೆ ಪಾಸಾಗಬೇಕು, ಕೆಲಸ ಗಳಿಸಬೇಕು, ಇಷ್ಟೇ ಅವರ ಆಸಕ್ತಿ.

ಹೀಗಾಗಿ, ಅವರೇನು ಮಾಡುತ್ತಾರೆ? ಮನೆಯಲ್ಲಿ ನಿಮ್ಮನ್ನು ನಿಮ್ಮ ಅಣ್ಣನ ಜತೆ ಅಥವಾ ಚಿಕ್ಕಪ್ಪನ ಮಗ ಅಥವಾ ಮಗಳ ಜತೆ ಹೋಲಿಸಿ ಅವರ ಹಾಗೆ ಜಾಣನಾಗು' ಎನ್ನುತ್ತಾರೆ; ಇದು ಪ್ರೇಮವಲ್ಲ. ಹೋಲಿಕೆ ಇರುವಲ್ಲಿ ಪ್ರೇಮವಿರುವುದಿಲ್ಲ; ನೋಡಿ ಒಬ್ಬಳು ತಾಯಿಗೆ ಹಲವು ಮಕ್ಕಳಿರುವಾಗ, ನಿಜಕ್ಕೂ ಆಕೆಗೆ ತನ್ನ ಮಕ್ಕಳ ಮೇಲೆ ಪ್ರೀತಿ ಇದ್ದರೆ ಹೋಲಿಕೆ ಮಾಡುವುದಿಲ್ಲ. ಆಕೆಗೆ ತನ್ನೆಲ್ಲ ಮಕ್ಕಳೂ ಮುಖ್ಯವೇ ಅಲ್ಲವೇ? ತಾಯಿ ಮೂರ್ಖಳೋ, ದಡ್ಡಿಯೋ, ಅಸಡ್ಡಾಳ ಪ್ರವೃತ್ತಿಯವಳೋ ಆಗಿರದಿದ್ದಲ್ಲಿ ಆಕೆ ತನ್ನ ಒಬ್ಬ ಹುಡುಗನನ್ನು ಆಯ್ಕೆ ಮಾಡಿಕೊಂಡು "ಇವನಂದ್ರೆ ನನಗೆ ತುಂಬಾ ಇಷ್ಟ. ನೀವೆಲ್ಲರೂ ಇವನ್ನು ಇಷ್ಟಪಡಬೇಕು" ಎಂದು ಹೇಳುವುದಿಲ್ಲ.

ತನ್ನ ಇರವಿನಲ್ಲೇ ಪ್ರೇಮಮಯಿಯಾದ ನಿಜವಾದ ತಾಯಿ ಯಾರನ್ನೂ ಹೋಲಿಸುವುದಿಲ್ಲ. ಹೆಳವ, ದಡ್ಡ ಮುಂತಾದವರು ಜಾಣ ಹುಡುಗರಷ್ಟೇ ಮುಖ್ಯವಾದವರು. ಅದೇ ರೀತಿಯಲ್ಲಿ ನಾವಿಲ್ಲಿ ಯಾವುದೇ ಆದರ್ಶವನ್ನಿಟ್ಟು ಕೊಳ್ಳಬಾರದು. ಮತ್ತು ಆ ನಿಟ್ಟಿನಲ್ಲಿ ಕಾವ್ಯ ನಿರ್ವಹಿಸುತ್ತೇವೆ ಎನ್ನಬಾರದು; ನಾವು ಎಲ್ಲ ಬಗೆಯ ಸ್ಪರ್ಧಾತ್ಮಕ ತುಲನೆಯನ್ನು ನಿವಾರಿಸಿಕೊಳ್ಳಬೇಕು.

ಶಿಕ್ಷಕನಾದವನು ಪ್ರತಿಯೊಬ್ಬ ಹುಡುಗನನ್ನೂ ಅಧ್ಯಯನ ಮಾಡಬೇಕು, ಆತನ ಸಾಮರ್ಥ್ಯಗಳೇನು, ಹೇಗೆ ಪ್ರಗತಿ ಸಾಧಿಸುತ್ತಿದ್ದಾನೆ, ಹೇಗೆ ಅಧ್ಯಯನ ಮಾಡುತ್ತಿದ್ದಾನೆ ಎಂಬುದನ್ನು ತಿಳಿದುಕೊಳ್ಳಬೇಕು. ಪ್ರಾಯಃ ನೀವು 'ಪ್ರಗತಿ' ಎಂಬ ಆ ಶಬ್ದವನ್ನು ಬಳಸಲೇಬಾರದು. ಪ್ರತಿಯೊಬ್ಬ ಹುಡುಗ ಅಥವಾ ಹುಡುಗಿ ಹೇಗೆ ಅಧ್ಯಯನಶೀಲನಾಗಬೇಕು, ಹೇಗೆ ಕಲಿಯಬೇಕು ಎಂದು ಸಹಾಯ ಮಾಡುವುದೇ ಕಷ್ಟಕರ ಸಂಗತಿ. ನಾವೀಗ ಹೋಲಿಕೆಯ ಮೂಲಕ, ಸ್ಪರ್ಧೆಯ ಮೂಲಕ, ದರ್ಜೆಗಳ ಮೂಲಕ ಕಲಿಯುತ್ತೇವೆ; ನಮ್ಮ ಮೇಲೆ ಒತ್ತಡ ಹೇರಲಾಗುತ್ತಿದೆ; ಅಲ್ಲವೇ? ನೀವು ತರಗತಿಯಲ್ಲಿ ಆಲಸಿಗಳಾಗಿದ್ದರೆ, ಏನಾಗುತ್ತದೆ? ನೀನು ಆಲಸಿ, ಆತ ಜಾಣ ಎಂದು ಎತ್ತಿಹೇಳಲಾಗುತ್ತದೆ. "ನೀನ್ಯಾಕೆ ಅವನ ಹಾಗೆ ಆಗಬಾರದು?" ಎಂದು ಶಿಕ್ಷಕರು ಹೇಳುವುದಲ್ಲದೆ ನಿಮಗೆ ಕಡಿಮೆ ಅಂಕಗಳನ್ನು ನೀಡುತ್ತಾರೆ, ಹೀಗಾಗಿ ನೀವು ಗಣಿತವನ್ನು ಕಲಿಯಲು ಎಲ್ಲಿಲ್ಲದಷ್ಟು ಹೆಣಗುತ್ತೀರಿ. ಆಗ ಏನಾಗುತ್ತದೆ? ನಿಮ್ಮ ಮಿದುಳು, ನಿಮ್ಮ ಅಸ್ತಿತ್ವ ತಿರುಚಲ್ಪಡುತ್ತದೆ. ಏಕೆಂದರೆ ನಿಮಗೆ ಗಣಿತದಲ್ಲಿ ಆಸಕ್ತಿಯಿಲ್ಲ. ಆದರೆ ನಿಮಗೆ ಬೇರೊಂದು ವಿಷಯದಲ್ಲಿ ಆಸಕ್ತಿಯಿದ್ದು ಅದರ ಮೂಲಕ ನೀವು ಗಣಿತವನ್ನು ಕಲಿಯಬಹುದು.

> *"ಭಯದ ಒಂದು ಕಾರಣವೆಂದರೆ ಅಸೂಯೆ, ಅಸೂಯೆ ಎಂದರೆ ತುಲನೆ - ಹೋಲಿಕೆ ಹಾಗೂ ಅಸೂಯೆಯನ್ನು ಆಧರಿಸಿದ ಸಮಾಜ ತನಗೂ ಹಾಗೂ ಇತರರಿಗೂ ಯಾತನೆಯನ್ನು ಸೃಷ್ಟಿಸುತ್ತದೆ."*
>
> - ಜೆ. ಕೃಷ್ಣಮೂರ್ತಿ

ಹೀಗೆ, ಭಯದ ನಿವಾರಣೆ ತುಂಬಾ ಕಷ್ಟಕರ; ಅದನ್ನು ಆಮೂಲಾಗ್ರವಾಗಿ ಮೊದಲಿನಿಂದ ಅಂದರೆ ನಿಮ್ಮ ಬಾಲ್ಯದಿಂದ, ಶಿಶುವಿಹಾರದ ಹಂತದಿಂದ, ಅತ್ಯಂತ ಎಳೆಯ ಹಂತದಿಂದ ಪ್ರಾರಂಭಮಾಡಿ ನೀವು ಈ ಸಂಸ್ಥೆಯನ್ನು ಬಿಟ್ಟುಹೋಗುವ ತನಕ ಅದು ಮುಂದುವರಿಯಬೇಕು. ಇದು ನಮ್ಮ ಕೆಲಸ, ಇದು 'ಆದರ್ಶ'ವಲ್ಲ. ಇದನ್ನು ಪ್ರತಿದಿನ ನಿರ್ವಹಿಸಬೇಕು, ನಾವೀಗ ಮಾಡುತ್ತಿರುವ ಹಾಗೆ ಇದನ್ನು ನಿರ್ವಹಿಸಬೇಕು, ಏಕೆಂದರೆ ನೋಡಿ, ಈ ತಥಾಕಥಿತ ನಾಗರಿಕ ಪ್ರಪಂಚದಲ್ಲಿ ಸ್ಪರ್ಧೆ ಕ್ರೌರ್ಯಕ್ಕೆ ಎಡೆ ಮಾಡಿಕೊಡುತ್ತದೆ. ಈ ಶಬ್ದದ ಅರ್ಥ ನಿಮಗೆ ಗೊತ್ತಾ? ಹಾಗೆಂದರೆ ಬರ್ಬರತೆ, ಇನ್ನೊಬ್ಬನ ಬಗ್ಗೆ ಅಗೌರವ, ಇನ್ನೊಬ್ಬನ ಬಗ್ಗೆ ಯೋಚನೆ ಮಾಡದಿರುವುದು. ಏಕೆಂದರೆ ನೀವು ಮಹತ್ವಾಕಾಂಕ್ಷಿಗಳಾಗಿದ್ದೀರಿ, ಪೈಪೋಟಿ ಮಾಡುವವರಾಗಿದ್ದೀರಿ, ಆಕ್ರಮಣಶೀಲರಿದ್ದೀರಿ. ನೀವು ಹೆಚ್ಚು ಹೆಚ್ಚು ಬೇಕೆಂದು ಬಯಸುತ್ತಿದ್ದೀರಿ, ಆದರೆ ನಿಮ್ಮ ಹಾಗೆ ಪ್ರತಿಯೊಬ್ಬರೂ ತಮಗೇ ಹೆಚ್ಚು ಹೆಚ್ಚು ಸಿಗಬೇಕು, ಆ ಹಕ್ಕು ತಮಗಿದೆ ಎಂದು ಭಾವಿಸುತ್ತಾರೆ. ಹೀಗಾಗಿ ಅವರೂ ನಿಮ್ಮ ಹಾಗೆ ಹೆಣಗಾಡುತ್ತಾರೆ. ದೇಶದ ಹೆಸರಿನಲ್ಲಿ, ಜನತೆಯ ಹೆಸರಿನಲ್ಲಿ, ಇನ್ನೂ ಇಂಥ ಹಲವು ವಿಷಯಗಳ ಹೆಸರಿನಲ್ಲಿ ನಮ್ಮ ಸಮಾಜ ಅಸೂಯೆ, ಹೊಟ್ಟೆಕಿಚ್ಚು ಹಾಗೂ ಮ ಹತ್ವಾಕಾಂಕ್ಷೆಯ ಮೇಲೆ ನಿಂತಿದೆ. ನೀವೇ ಅದರ ಕೇಂದ್ರ.

ಈ ಸ್ಪರ್ಧೆ ಕಡೆಗೆ ಯುದ್ಧ, ಜನರ ನಾಶ ಹಾಗೂ ಮಹಾದುರಂತದಲ್ಲಿ ಪರ್ಯಾವಸಾನವಾಗುತ್ತದೆ. ಜಗತ್ತಿನೆಲ್ಲೆಡೆ ಇದೆಲ್ಲವೂ ನಡೆಯುವುದನ್ನು ನೋಡುತ್ತಾ ಹೇಳುವುದಾದರೆ ನಮ್ಮಲ್ಲಿ ಕೆಲವರಾದರೂ ಈ ಬಗೆಯ ಶಿಕ್ಷಣದಲ್ಲಿ ನಿಜಕ್ಕೂ ಆಸಕ್ತಿಯುಳ್ಳವರು ಒಂದೆಡೆ ಸೇರಿ ಬೋಧನೆಯ ಕ್ರಮವನ್ನು, ಜೀವನ ಕ್ರಮವನ್ನು, ಹೋಲಿಕೆಯಿಲ್ಲದ, ನಿಮಗಿಂತ ಇನ್ನೊಬ್ಬರು ಬಹಳ ಮುಖ್ಯ ಎಂಬ ಪರಿಗಣನೆಯಿಲ್ಲದ ಶಿಕ್ಷಣ ಮಾರ್ಗವನ್ನು ರೂಪಿಸುವುದು ಸರಿಯಲ್ಲವೇ? ಉಳಿದವರೆಷ್ಟು ಮುಖ್ಯವೋ ನೀವೂ ಅಷ್ಟೇ ಮುಖ್ಯ; ಆದರೆ ನಿಮ್ಮಲ್ಲಿ ಆಸಕ್ತಿಯನ್ನು ಮೂಡಿಸುವುದು ಹೇಗೆ ಎಂಬುದನ್ನು ಶಿಕ್ಷಕರು ಕಂಡುಕೊಂಡಿಲ್ಲ. ನಿಮ್ಮ ಆಸಕ್ತಿಯನ್ನು ಅರಳಿಸುವ ಮಾರ್ಗವನ್ನು ಶಿಕ್ಷಕರು ಕಂಡುಕೊಂಡರೆ ಆಗ ನೀವು ಉಳಿದವರಷ್ಟೇ ಉತ್ತಮರಾಗುತ್ತೀರಿ.

ಹೀಗಾಗಿ, ನಾವು ಎಳೆಯವರಿರುವಾಗಲೆ ಹೋಲಿಕೆಯ ಈ ವ್ಯವಹಾರವನ್ನು ಅರಿಯುವುದು ಬಹಳ ಮುಖ್ಯ. ಹೋಲಿಕೆಯ ಮುಖೇನ ನಾವು ಕಲಿಯುತ್ತೇವೆ ಎಂದು ನಂಬಿದ್ದೇವೆ. ಆದರೆ ನಿಜಕ್ಕೂ ನಾವು ಕಲಿಯುವುದಿಲ್ಲ. ನಿಜವಾದ ಆವಿಷ್ಕಾರಿ, ನಿಜವಾದ ಸೃಜನಶೀಲ ವ್ಯಕ್ತಿ ಯಾರನ್ನೂ ಹೋಲಿಸುವುದಿಲ್ಲ. ಆತ ಕೇವಲ ಇದ್ದು ಬಿಡುತ್ತಾನೆ, ಬದುಕುತ್ತಾನೆ; 'ನಾನು ಎಡಿಸನ್‌ನ ಹಾಗೆ ಆಥವಾ ರಾಮನ ಹಾಗೆ ಒಳ್ಳೆಯವನಾಗಬೇಕು' ಎಂದು ಹೇಳುವುದಿಲ್ಲ; ಆತ ದುಡಿಯುತ್ತಾನೆ ಮತ್ತು ಬದುಕುತ್ತಾನೆ. ನೀವೊಂದು ಕವನ ಬರೆದು ಅದನ್ನು ಇನ್ನೊಬ್ಬನ ಕವಿತೆ ಜತೆ ಹೋಲಿಸಿದರೆ ನಿಮ್ಮ ಕಲಿಕೆಗೆ ಏನಾಗುತ್ತದೆ? ಕೀಟ್ಸ್, ಶೆಲ್ಲಿ ಅಥವಾ ಇನ್ನೊಬ್ಬ ಮಹಾಕವಿಯ ಜತೆ ನಿಮ್ಮನ್ನು ನೀವು ಹೋಲಿಸಿಕೊಂಡರೆ ಆಗ ನೀವು ಬರೆಯುವುದನ್ನೇ ನಿಲ್ಲಿಸಿಬಿಡುತ್ತೀರಿ. ನಿಮಗೇನೋ ಹೇಳಲಿಕ್ಕಿದೆ, ಅದಕ್ಕಾಗಿ ನೀವು ಬರೆಯಬೇಕು. ನೀವು ಅದನ್ನು ತುಂಬ ಕೆಟ್ಟದಾಗಿ ನಿರೂಪಿಸಿರಬಹುದು, ನಿಮ್ಮ ಕವಿತೆಯಲ್ಲಿ ಲಯ ಇಲ್ಲದಿರಬಹುದು, ಬಳಸಿದ ಪದಗಳು ಸುಲಲಿತವೂ ಸಮೃದ್ಧವೂ ಆಗಿಲ್ಲದಿರಬಹುದು, ಆದರೆ ನಿಮಗೇನೋ ಹೇಳಲಿಕ್ಕಿದೆ. ನೀವೇನು ಹೇಳುತ್ತೀರಿ - ಅದೆಷ್ಟೇ ಮೂರ್ಖತನದಿಂದ ಕೂಡಿರಲಿ ಅದು ನಿಮಗೆ ಬಹಳ ಮಹತ್ತ್ವದ್ದು; ಕೀಟ್ಸ್ ಅಥವಾ ಶೆಲ್ಲಿ ಅಥವಾ ಶೇಕ್ಸ್‌ಪಿಯರ್ ಏನು ಹೇಳಿದ್ದಾರೋ ಅಷ್ಟೇ ಮಹತ್ತ್ವದ್ದು ನಿಮ್ಮ ಮಾತು ನಿಮ್ಮ ಪಾಲಿಗೆ, ನೀವು ಹೋಲಿಕೆ ಮಾಡಲು ಶುರು ಮಾಡಿದರೆ, ಏನನ್ನೂ ಬರೆಯಲಾರಿರಿ.

"ವಿದ್ಯಾರ್ಥಿ ಸಂವಾದ, ವಾರಣಾಸಿ 1954" ಪುಸ್ತಕದಿಂದ
ಮೂಲ: "Talks with Students, Varanasi 1954"
ಅನು: ಡಾ. ಮಹಾಬಲೇಶ್ವರ ರಾವ್



ರೂಢಿ ಬದ್ಧತೆ ಹಾಗೂ ಮುಕ್ತಿ - ಜೆ. ಕೃಷ್ಣಮೂರ್ತಿ

ಬೆಳಿಗ್ಗೆ ಬಿರುಗಾಳಿ ಗುಡುಗು ಮಿಂಚುಗಳೊಂದಿಗೆ ಆರಂಭವಾಯಿತು. ಈಗ ಧಾರಾಕಾರ ಮಳೆ ಸುರಿಯುತ್ತಿದೆ. ಮಳೆ ದಿನವಿಡೀ ನಿಂತಿಲ್ಲ ಸುರಿದ ನೀರನ್ನೇ ಭೂಮಿ ಹೀರುತ್ತಿದೆ. ದೊಡ್ಡ ಮರದ ಕೆಳಗೆ ದನಕರುಗಳು ಆಶ್ರಯ ಪಡೆದಿವೆ. ಅಲ್ಲೇ ಬೆಳ್ಳಗಿನ ದೇವಾಲಯವಿದೆ. ಮರದ ಬುಡ ವಿಶಾಲವಾಗಿದೆ. ಅದರ ಸುತ್ತ ಹಸಿರು ಹುಲ್ಲು ಹರಡಿದೆ. ಹೊಲದ ಆ ಪಕ್ಕದಲ್ಲಿ ರೈಲು ಮಾರ್ಗ. ರೈಲು ಚಡಾವಿನಲ್ಲಿ ಭಾರಿ ಸದ್ದು ಮಾಡುತ್ತಾ ಸಾಗುತ್ತಿದೆ. ರೈಲು ಮಾರ್ಗದ ಗುಂಟ ಸಾಗುವವರು ಅಲ್ಲಿ ಒಮ್ಮೊಮ್ಮೆ ಟ್ರೈನಿನ ಆಘಾತಕ್ಕೆ ಎರಡು ಹೋಳಾದ ನಾಗರಹಾವನ್ನು ಕಾಣಬಹುದು. ಹಕ್ಕಿಗಳು ಕೂಡಲೇ ಹಾವಿನ ಹೆಣಕ್ಕೆ ಮುತ್ತಿಗೆ ಹಾಕಿ ಅದನ್ನು ತಿಂದು ಮುಗಿಸಿಬಿಡುತ್ತವೆ.

ಒಂಟಿಯಾಗಿ ಬದುಕಲು ವಿಶೇಷ ಬುದ್ಧಿಶಕ್ತಿ ಬೇಕು. ಒಂಟಿಯಾಗಿದ್ದೂ ನಮ್ರವಾಗಿರುವುದು ದುಸ್ತರ. ತನ್ನ ತೃಪ್ತಿಗಳ ಗೋಡೆ ಕಟ್ಟಿಕೊಳ್ಳದೆ ಏಕಾಂಗಿಯಾಗಿ ಬದುಕಲು ಅಸಾಧಾರಣ ಚುರುಕುತನ ಬೇಕು. ಏಕೆಂದರೆ ಒಂಟಿ ಬಾಳುವೆ ಔದಾಸೀನ್ಯವನ್ನು ಉಂಟುಮಾಡುತ್ತದೆ. ಸುಖಕರ ಅಭ್ಯಾಸವು ಬೆಳೆದು ಅದರಿಂದ ಹೊರಬರುವುದು ಕಷ್ಟವಾಗುತ್ತದೆ. ಒಂಟಿ ಬಾಳುವೆಯು ಪ್ರತ್ಯೇಕತೆಯನ್ನು ಪ್ರೋತ್ಸಾಹಿಸುತ್ತದೆ. ವಿವೇಕಿಗಳು ಮಾತ್ರವೇ ತಮಗೂ ಪರರಿಗೂ ಅನ್ಯಾಯಮಾಡದೆ ಒಂಟಿಯಾಗಿ ಬಾಳಲು ಸಾಧ್ಯ. ವಿವೇಕವು ಒಂಟಿ. ಆದರೆ ಸುಂದರವಾದ ಮಾರ್ಗವು ನಮ್ಮನ್ನು ವಿವೇಕದತ್ತ ಕರೆದೊಯ್ಯುವುದಿಲ್ಲ, ಪ್ರತ್ಯೇಕತೆಯೇ ಸಾವು, ಮುದುಡಿ ಕೊಳ್ಳುವುದರಲ್ಲಿ ವಿವೇಕವಿಲ್ಲ, ವಿವೇಕಕ್ಕೆ ಮಾರ್ಗಗಳಿಲ್ಲ, ಏಕೆಂದರೆ ಎಲ್ಲ ದಾರಿಗಳೂ ಪ್ರತ್ಯೇಕಗೊಳಿಸುತ್ತವೆ. ಬಹಿಷ್ಕರಿಸುತ್ತವೆ. ಪ್ರತ್ಯೇಕತೆಯನ್ನು ಏಕತೆ, ಸಮಗ್ರತೆ, ಏಕೈಕ ಎಂದೆಲ್ಲ ಕರೆದರೂ ದಾರಿಗಳು ಪ್ರತ್ಯೇಕತೆಯನ್ನು ಸೃಷ್ಟಿಸುತ್ತವೆ. ದಾರಿಯು ಬಹಿಷ್ಕರಿಸುವ ಕ್ರಿಯೆ. ಸಾಧನಗಳೇ ಬಹಿಷ್ಕರಿಸಲ್ಪಡುತ್ತವೆ. ಅಂತೆಯೇ ಗುರಿಯೂ ಸಾಧನವನ್ನೇ ಹೋಲುತ್ತದೆ. ಸಾಧನವು ಗುರಿಯಿಂದ ಅಭಿನ್ನ ಕ್ಷೇತ್ರದ ಜೊತೆಗಿನ, ದಾರಿಹೋಕನ ಜೊತೆಗಿನ ಹಾಗೂ ಚಂಚಲ ಆಲೋಚನೆಯ ಜೊತೆಗಿನ ಸಂಬಂಧದ ಗ್ರಹಿಕೆಯಲ್ಲಿ ವಿವೇಕ ಉಂಟಾಗುತ್ತದೆ. ಹಿಂದೆ ಸರಿಯುವುದು, ಕಂಡುಕೊಳ್ಳಲೆಂದು ಪ್ರತ್ಯೇಕಗೊಳ್ಳುವುದು. ಅದರದ್ದೇ ಶೋಧಕ್ಕೆ ಅಂತಿಮ ತೆರೆ ಎಳೆಯುವುದು. ಸಂಬಂಧವು ಏಕಾಂತಕ್ಕೆ ಹಾದಿ ಮಾಡಿಕೊಡುತ್ತದೆ. ಆದರೆ ಅದು ತನ್ನ ಸುತ್ತ ತಾನೇ ಪ್ರತ್ಯೇಕತೆಯ ಬೇಲಿ ಹಾಕಿಕೊಳ್ಳುತ್ತದೆ. ಮನಸ್ಸಿನಿಂದ ಮುಕ್ತಿ-ಏಕಾಂತ ಬೇಕು. ಸಂಪೂರ್ಣವಾದುದೇ ಏಕಾಂತ. ಅಪರಿಪೂರ್ಣವಾದುದು ಪ್ರತ್ಯೇಕತೆಯನ್ನು ಅರಸುತ್ತದೆ.

> "ನಿಮ್ಮ ಪ್ರೀತಿಯ ಕೆಲಸ ಯಾವುದೆಂದು ಕಂಡುಕೊಳ್ಳಲು ಅಪಾರ ವಿವೇಕ ಬೇಕು."
>
> - ಜೆ. ಕೃಷ್ಣಮೂರ್ತಿ

ಆಕೆ ಓರ್ವ ಲೇಖಕಿ, ಆಕೆಯ ಪುಸ್ತಕಗಳು ಸಾಕಷ್ಟು ಪ್ರಚಾರದಲ್ಲಿವೆ. ಹಲವು ವರ್ಷಗಳ ಬಳಿಕ ತಾನು ಭಾರತಕ್ಕೆ ಬಂದಿರುವುದಾಗಿ ಆಕೆ ಹೇಳಿದಳು. ಆರಂಭ ಮಾಡಿದಾಗ ತಾನು ಎಲ್ಲಿಗೆ ಬಂದು ಮುಟ್ಟುತ್ತೇನೆಂಬ ಅರಿವೆ ಇರಲಿಲ್ಲ, ಈಗ ಆಕೆಯ ಗುರಿ ಸ್ಪಷ್ಟವಿದೆ.

******

ಯಾವುದೇ ಆಶ್ರಮದಲ್ಲಿ ವ್ಯವಸ್ಥೆಯಲ್ಲಿ ಅಥವಾ ನಡತೆಯಲ್ಲಿ ಮುಕ್ತಿ ಸಂಪಾದಿಸಲು ಸಾಧ್ಯವಿಲ್ಲ, ಅಥವಾ ರೂಢಿಬದ್ಧತೆ ಮತ್ತು ಭಯವೆಂಬ ಶಿಸ್ತಿನ ಮೂಲಕ ಅದು ಲಭಿಸಲಾರದು. ಶಾಸ್ತ್ರಗಳು ಮುಕ್ತಿಯನ್ನು ಕರುಣಿಸಲಾರವು. ಅದು ಭರವಸೆ ಹುಟ್ಟಿಸುತ್ತದೆ. ಆದರೆ ಭರವಸೆಯು ಮುಕ್ತಿಯಲ್ಲ ಮುಕ್ತಿಗೆ ಮಾಧ್ಯಮವಾಗಿ ಅನುಕರಣೆಯು ಮುಕ್ತಿಯ ನಿರಾಕರಣೆಯೇ ಸರಿ. ಏಕೆಂದರೆ ಮಾಧ್ಯಮವೇ ಗುರಿ. ನಕಲು ಪ್ರತಿಯಿಂದ ಹಲವು ನಕಲು ಪ್ರತಿಗಳ ಸೃಷ್ಟಿಯಾದೀತೇ ಹೊರತು ಮುಕ್ತಿಯಲ್ಲ ಬಿಡುಗಡೆಯಲ್ಲ, ಆದರೆ ನಮ್ಮನ್ನು ನಾವು ರಂಜಿಸಿಕೊಳ್ಳಲು ಇಷ್ಟಪಡುತ್ತೇವೆ. ಆದುದರಿಂದಲೇ ಬಲಾತ್ಕಾರ ಅಥವಾ ಪುರಸ್ಕಾರದ ಭರವಸೆಯು ವಿವಿಧ ಸೂಕ್ಷ್ಮ ರೂಪಗಳಲ್ಲಿ ವ್ಯಕ್ತವಾಗುತ್ತದೆ. ಭರವಸೆಯು ಜೀವನದ ನಿರಾಕರಣೆ.

******

"ಈ ಏಕಾಂತದ ನೋವು ಅತ್ಯಂತ ಗಾಢವಾದುದು. ನಾನು ಈ ಬಗ್ಗೆ ಏನು ಮಾಡಲಿ? ಈ ಶೂನ್ಯವನ್ನು ನಾನು ಹೇಗೆ ಪರಿಗಣಿಸಲಿ?"

ದಾರಿಯನ್ನು ಕೇಳಿದಾಗ ನೀವು ಅನುಯಾಯಿಯಾಗುತ್ತೀರಿ. ನಿಮ್ಮೊಳಗೆ ಏಕಾಂತದ ನೋವಿದೆ. ನಿಮಗೆ ಸಹಾಯ ಬೇಕು, ಮಾರ್ಗದರ್ಶನದ ಬಗೆಗಿನ ಬೇಡಿಕೆಯು ಬಲಾತ್ಕಾರ, ಅನುಕರಣೆ ಹಾಗೂ ಭಯದ ಬಾಗಿಲುಗಳನ್ನು ತೆರೆಯುತ್ತದೆ.

******

"ನಾನು ಹೆಚ್ಚಿನ ಆಶ್ರಮಗಳಿಗೆ ಭೇಟಿ ಕೊಟ್ಟಿದ್ದೇನೆ. ಅಲ್ಲಿನ ಜನಗಳು ತಾವು ಸತ್ಯವೆಂದು ಕರೆಯುವ ಆಲೋಚನೆಯ ಕ್ರಮಕ್ಕೆ ನಿಮ್ಮನ್ನು ಕಟ್ಟಿಹಾಕಲು ಹೊರಟಿರುತ್ತಾರೆ. ಒಂದು ನಿರ್ದಿಷ್ಟ ಶಾಸ್ತ್ರ ಅಥವಾ ಗುರು ಬೋಧಿಸಿದ ಜೀವನ ಕ್ರಮಕ್ಕೆ ಕಟ್ಟುಬೀಳಲು ಯಾಕೆ ಅವರೆಲ್ಲ ಬಯಸುತ್ತಾರೆ? ಅವರು ಯಾಕೆ ಯಾವಾಗಲೂ ಸ್ವಾತಂತ್ರ್ಯವನ್ನು ಕೊಡದೆ ಅದರ ಬಗ್ಗೆ ಭರವಸೆ ನೀಡುತ್ತಿರುತ್ತಾರೆ?"

ರೂಢಿಬದ್ಧತೆ ತೃಪ್ತಿದಾಯಕ. ಅದು ಶಿಷ್ಯರಿಗೆ ಭದ್ರತೆಯ ಭರವಸೆ ನೀಡುತ್ತದೆ. ಮೇಲಾಗಿ ಗುರುಶಿಷ್ಯರಿಬ್ಬರಿಗೂ ಬಲ ಒದಗಿಸುತ್ತದೆ. ರೂಢಿಬದ್ಧತೆಯ ಮೂಲಕ ಧಾರ್ಮಿಕ ಅಥವಾ ಮತ ನಿರಪೇಕ್ಷ ಅಧಿಕಾರ ಬಲಿಷ್ಠವಾಗುತ್ತದೆ. ರೂಢಿಬದ್ಧತೆಯು ಮಂಕುತನಕ್ಕೆ ಕಾರಣ. ಇದನ್ನೇ ಜನ ಶಾಂತಿ, ಮನಃಶಾಂತಿ ಎನ್ನುತ್ತಾರೆ. ಯಾವುದಾದರೊಂದು ಬಗೆಯ ಪ್ರತಿರೋಧದ ಮೂಲಕ ಯಾತನೆಯನ್ನು ದೂರವಿಡುವಿರಾದರೆ ಅದರಿಂದ ನೋವಾಗಬಹುದಾದರೂ ಆ ಹಾದಿಯನ್ನು ಏಕೆ ತುಳಿಯಬಾರದು? ರೂಢಿಬದ್ಧತೆಯು ಸಂಘರ್ಷಿಸುವ ಮನಸ್ಸಿನ ಅರಿವನ್ನು ಅಳಿಸುತ್ತದೆ. ನಮ್ಮನ್ನು ಸಂವೇದನಾಶೂನ್ಯವಾಗಿರಿಸಲು, ಮಂಕಾಗಿಸಲು ಬಯಸುತ್ತದೆ. ಕುರೂಪವನ್ನು ನೋಡಲು ನಾವು ಬಯಸುವುದಿಲ್ಲ ಹಾಗಾಗಿ ಸುಂದರವಾದುದರ ಬಗ್ಗೆಯೂ ನಾವು ಮಂಕಾಗಿರುತ್ತೇವೆ. ಸತ್ತಿರುವ ಅಥವಾ ಜೀವಂತವಾಗಿರುವ ಯಾವುದಕ್ಕಾದರೂ ಬದ್ಧವಾಗಿರುವುದು ಅತೀವ ತೃಪ್ತಿ ನೀಡುತ್ತದೆ. ಗುರುವಿಗೆ ಗೊತ್ತು ಆದರೆ ನಿಮಗೆ ಗೊತ್ತಿಲ್ಲ, ನಿಮ್ಮನ್ನು ಸಂತೈಸುವ ಗುರುವಿಗೆ ವಿಷಯ ಮೊದಲೇ ಗೊತ್ತಿದ್ದರೂ ನಿಮ್ಮ ಪಾಡಿಗೆ ನೀವೇ ಕಂಡುಕೊಳ್ಳುವುದು ಮೂರ್ಖತನ. ಹೀಗಾಗಿ ನೀವು ಆತನ ಗುಲಾಮನಾಗುತ್ತೀರಿ. ಮತ್ತು ಗೊಂದಲಕ್ಕಿಂತ ಗುಲಾಮತನವೇ ಉತ್ತಮ. ಗುರು ಹಾಗೂ ಶಿಷ್ಯರು ಪರಸ್ಪರ ಶೋಷಣೆಯನ್ನು ಆಶ್ರಯಿಸುತ್ತಾರೆ. ನೀವು ಸುಖ ಪಡೆಯಲು ಸುತ್ತ ಆವರಿಸುವ ಶಿಸ್ತು ಹಾಗೂ ನಂಬಿಕೆಯ ಜೀವನ ನಡೆಸಲು ಹಾಗೂ ಆರಾಧಿಸಲ್ಪಡಲು ಹೋಗುತ್ತೀರಿ. ಇದೆಲ್ಲವನ್ನೂ ಸತ್ಯದ ಶೋಧವೆಂದು ಜನ ಕರೆಯುತ್ತಾರೆ.

ಹೇಗೆ ಎಂಬುದು ಸದ್ಯಕ್ಕೆ ಮುಖ್ಯ ಅಲ್ಲವೇ ಅಲ್ಲ. ಆದುದರಿಂದ ನಾವು ಈ ನೋವನ್ನು ದೂರ ಸರಿಸುವ, ಮೀರಿ ನಿಲ್ಲುವ ಅಥವಾ ಅದರಾಚೆಗೆ ಸಾಗುವ ಪ್ರಯತ್ನ ಮಾಡವುದಕ್ಕಿಂತಲೂ ಈ ನೋವಿನ ಸ್ವರೂಪವನ್ನು ಗ್ರಹಿಸಲು ಪ್ರಯತ್ನಿಸೋಣ. ಏಕಾಂತದ ಈ ನೋವಿನ ಪೂರ್ಣಗ್ರಹಿಕೆಯಾಗದ ಹೊರತು ಅಲ್ಲಿ ಶಾಂತಿ, ನೆಮ್ಮದಿ ನೆಲೆಸಲು ಸಾಧ್ಯವಿಲ್ಲ, ಕೇವಲ ಸಂಘರ್ಷ ಮಾತ್ರ ಇರಬಲ್ಲದು. ಇದರ ಬಗ್ಗೆ ನಮಗೆ ಅರಿವು ಇರುತ್ತದೋ ಇಲ್ಲವೋ, ಅಂತು ನಮ್ಮಲ್ಲಿ ಹೆಚ್ಚಿನವರು ಅದರ ಭಯದಿಂದ ಸೂಕ್ಷ್ಮವಾಗಿ ಅಥವಾ ಒರಟಾಗಿ ಪಾರಾಗಲು ಬಯಸುತ್ತೇವೆ. ಈ ನೋವು ಭೂತಕಾಲಕ್ಕೆ ಸಂಬಂಧಿಸಿದ್ದೇ ಹೊರತು ವರ್ತಮಾನದ್ದಲ್ಲ, ಏನಾಗಿದೆಯೋ ಅದನ್ನು ಶಾ ಬ್ಧಿಕವಾಗಿ ಸೈದ್ಧಾಂತಿಕವಾಗಿ ಶೋಧಿಸದೇ ನೇರವಾಗಿ ಅನುಭವಿಸಬೇಕು. ನೋವು ಅಥವಾ ಭಯದ ಹಿನ್ನೆಲೆಯೊಂದಿಗೆ ವರ್ತಮಾನದ ಅನುಸಂಧಾನ ಮಾಡಿದರೆ ಅಲ್ಲಿ ಶೋಧವಿರಲು ಸಾಧ್ಯವೆ? ಇದನ್ನು ಗ್ರಹಿಸಲು ನೀವು ಮುಕ್ತವಾಗಿರಬೇಡವೆ? ಗತಕಾಲದ ಆ ಜ್ಞಾನವನ್ನು ಕಳಚಿಕೊಳ್ಳಬೇಡವೆ? ಅಭ್ಯಾಸಗತ ಪ್ರತಿಕ್ರಿಯೆಗಳು ಹಾಗೂ ಸ್ಮೃತಿಯ ಮೋಡಗಳಿಲ್ಲ ಚದುರಿದ ಮುಕ್ತ ಮನದಿಂದ ನೀವು ಬರಬೇಕಲ್ಲವೆ? ಹೊಸತನ್ನು ಕಾಣಲು ಮನಸ್ಸು ಹೇಗೆ ಮುಕ್ತವಾಗಬೇಕು ಎಂದು ದಯವಿಟ್ಟು ಪ್ರಶ್ನಿಸಬೇಡಿ. ಅದರ ಸತ್ಯವನ್ನು ಕಿವಿಗೊಟ್ಟು ಆಲಿಸಿ. ಸತ್ಯವು ಬಿಡುಗಡೆಗೊಳಿಸುತ್ತದೆಯೇ ಹೊರತು ಬಿಡುಗಡೆಗೊಳ್ಳಬೇಕೆಂಬ ಕಾಮನೆಯಲ್ಲಿ ಮುಕ್ತವಾಗಬೇಕೆಂಬ ಕಾಮನೆ ಹಾಗೂ ಪ್ರಯತ್ನವು ಮುಕ್ತಿಗೆ ಬಾಧಕ.

ಹೊಸತನ್ನು ಗ್ರಹಿಸಲು ತನ್ನೆಲ್ಲ ನಿರ್ಣಯಗಳು ಹಾಗೂ ರಕ್ಷಣೆಗಳ ಜೊತೆ ಮನಸ್ಸು ತನ್ನ ಚಟುವಟಿಕೆಗಳನ್ನು ಸ್ಥಗಿತಗೊಳಿಸಬೇಡವೆ? ಈ ಏಕಾಂತದಿಂದ ಪಾರಾಗಲು ಮದ್ದು ಕಂಡುಕೊಳ್ಳದ ಮನಸ್ಸು ಪರಾರಿಯ ಮಾರ್ಗಗಳನ್ನು ಕಂಡುಕೊಳ್ಳದೆ ನಿಶ್ಚಲವಾಗಿರಬೇಡವೆ? ಏಕಾಂತದ ನೋವನ್ನು ಅದರೆಲ್ಲ ನಿರಾಶೆ ಹಾಗೂ ಭರವಸೆಗಳೊಡನೆ ಗಮನಿಸಬೇಡವೆ? ಈ ಚಲನೆಯೇ ಏಕಾಂತ ಹಾಗೂ ಅದರ ಭಯಕ್ಕೆ ಕಾರಣವಲ್ಲವೆ? ಮನಸ್ಸಿನ ಚಟುವಟಿಕೆಯು ಪ್ರತ್ಯೇಕತೆಯ ಪ್ರತಿಶೋಧನೆಯ ಪ್ರಕ್ರಿಯೆಯಲ್ಲವೆ? ಮನಸ್ಸಿನ ಪ್ರತಿಯೊಂದು ಬಗೆಯ ಸಂಬಂಧವೂ ಒಂದು ಬಗೆಯ ಪ್ರತ್ಯೇಕತೆಯಲ್ಲವೆ? ಮುದುಡುವಿಕೆಯಲ್ಲವೆ? ಅನುಭವವೇ ಸ್ವಪ್ರತ್ಯೇಕೀಕರಣದ ಪ್ರಕ್ರಿಯೆಯಲ್ಲವೆ? ಹೀಗಾಗಿ ಏಕಾಂತದ ನೋವು ಸಮಸ್ಯೆಯಲ್ಲ ಸಮಸ್ಯೆಯನ್ನು ಪ್ರಕ್ಷೇಪಿಸುವ ಮನಸ್ಸೇ ಸಮಸ್ಯೆ. ಮನಸ್ಸನ್ನು ಗ್ರಹಿಸುವುದೇ ಮುಕ್ತಿಯ ಆರಂಭ. ಮುಕ್ತಿಯು ಭವಿಷ್ಯದಲ್ಲಿಲ್ಲ. ಅದೇ ಮೊದಲ ಹೆಜ್ಜೆ ಪ್ರತಿಯೊಂದು ಬಗೆಯ ಪ್ರಚೋದನೆಗೆ ನೀಡುವ ಪ್ರತಿಕ್ರಿಯೆಯ ಮೂಲಕ ಮನಸ್ಸಿನ ಚಟುವಟಿಕೆಯನ್ನು ಗ್ರಹಿಸಬಹುದು. ಪ್ರಚೋದನೆ ಹಾಗೂ ಪ್ರತಿಕ್ರಿಯೆಗಳು ಎಲ್ಲ ಹಂತಗಳಲ್ಲಿ ಕಂಡುಬರುವ ಸಂಬಂಧಗಳು.

ಜ್ಞಾನದ, ಅನುಭವದ, ನಂಬಿಕೆಯ ರೂಪದ ಯಾವುದೇ ಬಗೆಯ ಸಂಚಯನವು ಮುಕ್ತಿಗೆ ಅಡಚಣೆ. ಎಲ್ಲಿ ಮುಕ್ತಿ ಇದೆಯೋ ಅಲ್ಲಿ ಸತ್ಯವಿದೆ.

> *"ಜ್ಞಾನದ, ಅನುಭವದ, ನಂಬಿಕೆಯ ರೂಪದ ಯಾವುದೇ ಬಗೆಯ ಸಂಚಯನವು ಮುಕ್ತಿಗೆ ಅಡಚಣೆ. ಎಲ್ಲಿ ಮುಕ್ತಿ ಇದೆಯೋ ಅಲ್ಲಿ ಸತ್ಯವಿದೆ."*
>
> *- ಜೆ. ಕೃಷ್ಣಮೂರ್ತಿ*

"ಬಾಳಿಗೊಂದು ಭಾಷ್ಯ- ಸಂಪುಟ 2" ಪುಸ್ತಕದಿಂದ
ಮೂಲ: "Commentaries on Living - vol 2"
ಅನು: ಡಾ. ಮಹಾಬಲೇಶ್ವರ ರಾವ್

ಕನ್ನಡದಲ್ಲಿ ಜೆ.ಕೃಷ್ಣಮೂರ್ತಿ ಪುಸ್ತಕಮಾಲೆ

೧. ಧ್ಯಾನ ಚಿಂತನ
ಅನು. ಡಾ. ನಿ. ಮುರಾರಿ ಬಲ್ಲಾಳ ರೂ. ೫೦/-

೨. ಜೆ.ಕೆ. ಜೀವನ – ದರ್ಶನ
ಲೇ. ಡಾ. ನಿ. ಮುರಾರಿ ಬಲ್ಲಾಳ ರೂ.೧೩೦/-

೩. ತಿಳಿದುದೆಲ್ಲವ ಬಿಟ್ಟು... ***
ಅನು. ಪ್ರೊ. ಜಿ. ವೆಂಕಟಸುಬ್ಬಯ್ಯ ರೂ. ೯೦/-

೪. ಸಂಸ್ಕೃತಿ ಸಂಗತಿ ***
ಅನು. ಪ್ರೊ.ಎಚ್.ಎಸ್.ರಾಘವೇಂದ್ರ ರಾವ್ ರೂ.೧೫೦/-

೫. ಶಿಕ್ಷಣ ಮತ್ತು ಜೀವನ
ಅನು. ಪ್ರೊ.ಎಚ್.ಎಸ್.ರಾಘವೇಂದ್ರ ರಾವ್ ರೂ. ೬೫/-

೬. ಅನುದಿನ ಚಿಂತನ
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ.೨೫೦/-

೭. ಹಿಂಸೆಯನ್ನು ಮೀರಿ
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ.೧೨೦/-

೮. ಭಯ, ಸ್ವಾತಂತ್ರ್ಯ ಮತ್ತು ಶಿಕ್ಷಣ
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ.೨೦/-

೯. ಭಯದಾಚೆಯ ಬದುಕು ***
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ.೨೦/-

೧೦. ದುಃಖಕ್ಕೆ ವಿದಾಯ ***
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ.೨೫/-

೧೧. ಸಂಘರ್ಷವಿರದ ಬದುಕಿಗಾಗಿ ***
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ.೨೫/-

೧೨. ಸಂಬಂಧವೆಂದರೇನು?
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ.೨೫/-

೧೩. ಪ್ರೀತಿ ಎಂದರೇನು? ***
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ.೨೫/-

೧೪. ಅಸೂಯೆ ***
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ.೩೦/-

೧೫. ಬಾಳಿಗೊಂದು ಭಾಷ್ಯ - ಸಂಪುಟ ೧
ಅನು. ಡಾ. ಮಹಾಬಲೇಶ್ವರ ರಾವ್ ರೂ.೧೩೦/-

೧೬. ಬಾಳಿಗೊಂದು ಭಾಷ್ಯ - ಸಂಪುಟ ೨
ಅನು. ಡಾ. ಮಹಾಬಲೇಶ್ವರ ರಾವ್ ರೂ.೧೫೦/-

೧೭. ಬಾಳಿಗೊಂದು ಭಾಷ್ಯ - ಸಂಪುಟ ೩
ಅನು. ಡಾ. ಮಹಾಬಲೇಶ್ವರ ರಾವ್ ರೂ.೧೮೫/-

೧೮. ಮೊದಲ ಹಾಗೂ ಕೊನೆಯ ಬಿಡುಗಡೆ
ಅನು. ರುಕ್ಮಿಣಿ ಕೃಷ್ಣಮೂರ್ತಿ ರೂ.೨೦೦/

೧೯. ಭಯ ನಿಮಗೇನು ಮಾಡೀತು?
ಅನು. ಎಸ್. ದಿವಾಕರ್ ರೂ.೪೦/-

೨೦. ಇನ್ನೊಬ್ಬರ ಬಗ್ಗೆ ಕಾಳಜಿ - ಹಾಗೆಂದರೇನು?
ಅನು. ಪ್ರೊ.ಎಚ್.ಎಸ್.ರಾಘವೇಂದ್ರ ರಾವ್ ರೂ.೪೦/-

೨೧. ಸ್ವಾತಂತ್ರ್ಯ ಎಂದರೇನು?
ಅನು. ಗಿರೀಶ್ ವಾಫ್ ರೂ.೪೦/-

೨೨. ಶಿಕ್ಷಣ
ಅನು. ಎಸ್.ಡಿ. ಕಾಶೀಕರ ರೂ.೯೦/-

೨೩. ಬದುಕಿನ ಕಡೆಗೆ
ಅನು. ಎಸ್.ಡಿ. ಕಾಶೀಕರ ಮತ್ತು
ವನಮಾಲಾ ಆರ್. ರಾವ್ ರೂ.೧೪೦/-

೨೪. ಚಲನಶೀಲ ಬದುಕು - ಕಲಿಕೆ
ಅನು. ಡಾ. ಮಹಾಬಲೇಶ್ವರ ರಾವ್ ರೂ.೧೫೦/-

೨೫. ನೀವೇ ಲೋಕ, ನಿಮ್ಮೊಳಗೇ ಲೋಕ
ಅನು. ಡಾ. ಮಹಾಬಲೇಶ್ವರ ರಾವ್ ರೂ. ೧೦೦/-

೨೬. ಮಾನವನಾಗುವುದು
ಅನು. ಡಾ. ಮಹಾಬಲೇಶ್ವರ ರಾವ್ ರೂ. ೧೪೦/-

೨೭. ಸಾವಿನೊಂದಿಗೆ ಬದುಕುವುದೆಂದರೆ
ಅನು. ಡಾ|| ವನಮಾಲಾ ವಿಶ್ವನಾಥ್ ರೂ.೨೫/-

೨೮. ಆಯ್ಕೆಯ ನಿರರ್ಥಕತೆ
ಅನು. ಧರ್ಮಶ್ರೀ ಅಯ್ಯಂಗಾರ್ ರೂ. ೨೫/-

೨೯. ಧಾರ್ಮಿಕ ಜೀವನ ಮತ್ತು ಬದುಕಿನ ಕಲೆ
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ ರೂ. ೨೫/-

೩೦. ಸ್ವಾತಂತ್ರ್ಯ, ಜವಾಬ್ದಾರಿ ಮತ್ತು ಶಿಸ್ತು
ಅನು. ಡಾ. ಸುವರ್ಣ ಬಿ.ಜೆ. ರೂ. ೨೫/-

೩೧. ಕಾಲ ಮತ್ತು ಕಾಲರಹಿತ
ಅನು. ವನಮಾಲಾ ರಂಗನಾಥ ರಾವ್ ರೂ. ೨೫/-

೩೨. ಧ್ಯಾನಮಗ್ನ ಮನಸ್ಸು
ಅನು. ಆಶಾ ಕೋಣಿ ರೂ. ೨೫/-

೩೩. ಕ್ರಿಯೆ ಮತ್ತು ಸಂಬಂಧ
ಅನು. ಶ್ರೀ ಬಿ.ಎ. ಸನದಿ ರೂ. ೨೫/-

೩೪. ದೇವರು
ಅನು. ಡಾ. ಮಹಾಬಲೇಶ್ವರ ರಾವ್ ರೂ. ೧೨೫/-

೩೫. ಒಲವು ಒಂಟಿತನ
ಅನು. ಡಾ. ಮಹಾಬಲೇಶ್ವರ ರಾವ್ ರೂ. ೧೩೫/-

೩೬. ಸಂಕಷ್ಟಮಯ ಜಗತ್ತಿನ ಜೊತೆ ಮುಖಾಮುಖಿ
ಅನು. ಡಾ. ಮಹಾಬಲೇಶ್ವರ ರಾವ್ ರೂ. ೧೫೦/-

೩೭. ಒಳಜಗತ್ತು
ಅನು. ಡಾ. ಮಹಾಬಲೇಶ್ವರ ರಾವ್ ರೂ. ೧೪೦/-

೩೮. ಸಾಮಾಜಿಕ ಜವಾಬ್ದಾರಿ
ಅನು. ಡಾ. ಮಹಾಬಲೇಶ್ವರ ರಾವ್ ರೂ. ೧೧೦/-

೩೯. ಶಿಕ್ಷಕನಿಗೆ ಶಿಕ್ಷಣ
ಅನು. ಡಾ. ಬಿ.ಬಿ. ರಾಜಪುರೋಹಿತ್ ರೂ. ೫೦/-

***** ಈ ಪುಸ್ತಕಗಳ ಪ್ರತಿಗಳು ಸಧ್ಯಕ್ಕೆ ಲಭ್ಯವಿಲ್ಲ.**

ಜೆ.ಕೃಷ್ಣಮೂರ್ತಿ ಪುಸ್ತಕಗಳು : ರಿಯಾಯಿತಿಯಲ್ಲಿ ಲಭ್ಯ













ಆತ್ಮೀಯ ಸಹಪಯಣಿಗರೇ,

ಈ ಮೇಲಿನ ಆರು ಕಿರುಪುಸ್ತಕಗಳ ಹಾಗೂ ಈ ಕೆಳಗಿನ ನಾಲ್ಕು ಪುಸ್ತಕಗಳ 100ಕ್ಕೂ ಹೆಚ್ಚು ಪ್ರತಿಗಳು 50% ವರೆಗೆ ರಿಯಾಯಿತಿ ದರದಲ್ಲಿ ಲಭ್ಯವಿವೆ. ನಿಮ್ಮ ಬಳಗದ ಗ್ರಂಥಾಲಯ, ಪುಸ್ತಕಾಲಯ, ವಿದ್ಯಾರ್ಥಿಗಳು, ಶಿಕ್ಷಕರು, ಬಂಧುಗಳು, ಇತ್ಯಾದಿ ಆಸಕ್ತರಿಗೆ ತಿಳಿಸಿ.

ಪ್ರತಿಗಳಿಗಾಗಿ ಸಂಪರ್ಕಿಸಿ – 7760807069, 9972995800.









Published by:
Editor: Smt. Sushama Inamdar
The Study Bangalore Education Centre
Krishnamurti Foundation India
Thataguni Post, Bangalore - 560082

Contact Information:
Mob: 9482641389 / 8317419451
Email: kfistudy@gmail.com
Website: www.kfistudy.org

ಕನ್ನಡ ಭಾಷಾಂತರ ಸಮಿತಿ ಸದಸ್ಯರು:
ಡಾ|| ಎಚ್. ಎಸ್. ರಾಘವೇಂದ್ರರಾವ್
ಪ್ರೊ|| ಓ. ಎಲ್. ನಾಗಭೂಷಣ ಸ್ವಾಮಿ
ಡಾ|| ವನಮಾಲಾ ವಿಶ್ವನಾಥ್